## ಗ್ರಾಮ ಸಡಕ್ ಯೋಜನೆ ಅನುಷ್ಠಾನ

**629(1247): ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)**

ಅ) ಗ್ರಾಮ ಸಡಕ್ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿಪಡಿಸಲಾದ ಗ್ರಾಮೀಣ ರಸ್ತೆಗಳ ವಿಸ್ತೀರ್ಣ ಎಷ್ಟು; ಇದಕ್ಕಾಗಿ ಕೇಂದ್ರದಿಂದ ಬಂದಿರುವ ಅನುದಾನವೆಷ್ಟು; (ಜಿಲ್ಲಾವಾರು ಕಿ.ಮೀ. ವಾರು ಗ್ರಾಮೀಣ ರಸ್ತೆಗಳ ಅಭಿವೃದ್ಧಿ ವಿವರಗಳನ್ನು ಒದಗಿಸುವುದು)

ಆ) ಈ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಪ್ರಸ್ತಾವನೆ ಕಳುಹಿಸಿದ್ದ ಮೊತ್ತವೆಷ್ಟು; ಕೇಂದ್ರದಿಂದ ಬಂದಿರುವ ಮೊತ್ತವೆಷ್ಟು;

ಇ) ಉದ್ದೇಶಿತ ಗ್ರಾಮೀಣ ರಸ್ತೆಯ ಅಭಿವೃದ್ಧಿಯ ಜೊತೆಗೆ ಬಾಕಿ ಉಳಿದ ರಸ್ತೆಗಳ ಅಭಿವೃದ್ಧಿಗೆ ಯಾವ ಯೋಜನೆ ಹಮ್ಮಿಕೊಳ್ಳಲಾಗುತ್ತದೆ;

ಈ) ಪ್ರಸಕ್ತ ರಾಜ್ಯದ ಗ್ರಾಮಾಂತರದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧೀನಕ್ಕೊಳಪಡುವ ರಸ್ತೆಗಳೆಷ್ಟು; ಇದರಲ್ಲಿ ದುಸ್ಥಿತಿಯಲ್ಲಿರುವ ರಸ್ತೆಗಳ ವಿಸ್ತೀರ್ಣ ಎಷ್ಟು;

ಉ) ರಸ್ತೆಗಳ ನಿರ್ವಹಣೆಗಾಗಿ ರಾಜ್ಯ ಸರ್ಕಾರ ಮೀಸಲಿಟ್ಟಿರುವ ಹಣ ಎಷ್ಟು; ಕಾಮಗಾರಿಗೆ ಅನುಸರಿಸುವ ಮಾನದಂಡಗಳೇನು; ಸದರಿ ರಸ್ತೆ ಅಭಿವೃದ್ಧಿಗೆ ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ? (ವಿವರ ಒದಗಿಸುವುದು)

**ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಈವರೆಗೆ ರಾಜ್ಯದಲ್ಲಿ ಯಲ್ಲಿ ರಾಜ್ಯದಲ್ಲಿ ಒಟ್ಟು 16,161.60 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ.

ಈ ಕಾರ್ಯಕ್ರಮದಡಿ ಕೇಂದ್ರ ಸರ್ಕಾರದಿಂದ ₹ 3155.2146 ಕೋಟಿಗಳು ಬಿಡುಗಡೆಯಾಗಿರುತ್ತದೆ. (ಗ್ರಾಮೀಣ ರಸ್ತೆಗಳ ಜಿಲ್ಲಾವಾರು/ಕಿ.ಮೀ.ವಾರು ವಿವರ ಅನುಬಂಧ–1 ರಲ್ಲಿ ನೀಡಿದೆ)

ಆ) ಈ ಯೋಜನೆಯ ಅನುಷ್ಠಾನಕ್ಕೆ ರಾಜ್ಯ ಸರ್ಕಾರವು ₹ 4385.36 ಕೋಟಿಗಳ ಪ್ರಸ್ತಾವನೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಕೇಂದ್ರದಿಂದ ₹ 3155.2146 ಕೋಟಿಗಳು ಬಿಡುಗಡೆಯಾಗಿರುತ್ತದೆ.

ಇ) ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯೊಂದಿಗೆ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು ಕೆಳಕಂಡ ಯೋಜನೆಗಳಲ್ಲಿಯೂ ಕೈಗೊಳ್ಳಲಾಗುತ್ತಿದೆ.

1. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–1 ಮತ್ತು ಹಂತ–2 (ರಾಜ್ಯದ 189 ಗ್ರಾಮೀಣ ಮತಕ್ಷೇತ್ರಗಳಲ್ಲಿ ಹಂತ–1ರಡಿ ತಲಾ 20 ಕಿ.ಮೀ. ನಂತೆ ಹಾಗೂ ಹಂತ–2ರಡಿ ತಲಾ 30 ಕಿ.ಮೀ. ನಂತೆ ಕೈಗೊಳ್ಳಲಾಗಿದೆ.)
2. ನಬಾರ್ಡ್ ಆರ್ಐಡಿಎಫ್ ಯೋಜನೆ.
3. ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಕ್ಕ ಶೀರ್ಷಿಕೆ–3054 ಮತ್ತು ಯೋಜನೇತರ ಲೆಕ್ಕ ಶೀರ್ಷಿಕೆ–3054.
4. 13ನೇ ಹಣಕಾಸು ಆಯೋಗ ಯೋಜನೆ.

ಈ) ರಾಜ್ಯದಲ್ಲಿ ಒಟ್ಟು 155545.26 ಕಿ.ಮೀ. ಉದ್ದ ಗ್ರಾಮೀಣ ರಸ್ತೆಗಳಿದ್ದು, ಅವುಗಳ ವಿವರ ಕೆಳಕಂಡಂತಿದೆ.

| ಕ್ರ. ಸಂ. | ವಿವರ | ರಸ್ತೆ ಉದ್ದ (ಕಿ.ಮೀ. ಗಳಲ್ಲಿ) |
|---|---|---|
| 1 | ಡಾಂಬರೀಕರಣಗೊಂಡ ರಸ್ತೆ | **58183.98** |
| 2 | ಜಲ್ಲಿ ರಸ್ತೆ | **21494.82** |
| 3 | ಮಣ್ಣಿನ ರಸ್ತೆ | **75866.46** |
| | ಒಟ್ಟು | **155545.26** |

ಇವುಗಳಲ್ಲಿ ಜಲ್ಲಿ ರಸ್ತೆಗಳು ಹಾಗೂ ಮಣ್ಣಿನ ರಸ್ತೆಗಳು ದುಸ್ಥಿತಿಯಲ್ಲಿರುತ್ತವೆ.

ಊ) 2014–15ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಕಾಮಗಾರಿಗಳ ನಿರ್ವಹಣೆಗಾಗಿ ಒಟ್ಟು ₹ 136.79 ಕೋಟಿಗಳು ಮೀಸಲಿಟ್ಟಿದ್ದು ₹ 107.13 ಕೋಟಿಗಳು ಬಿಡುಗಡೆಯಾಗಿರುತ್ತದೆ.

ಪ್ರಸ್ತುತ ಸಾಲಿನಲ್ಲಿ ಗ್ರಾಮೀಣ ರಸ್ತೆಗಳನ್ನು ಈ ಕೆಳಕಂಡ ಯೋಜನೆಗಳಡಿ ನಿರ್ವಹಿಸಲಾಗುತ್ತಿದೆ.

| ಯೋಜನೆ | ಮೊತ್ತ (₹ ಕೋಟಿಗಳಲ್ಲಿ) |
|---|---|
| 1. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ | 153.55 |
| 2. 13ನೇ ಹಣಕಾಸು ಯೋಜನೆ | 134.70 |
| 3. 3054–ಯೋಜನೇತರ | 135.00 |

ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿ ಜಿಲ್ಲಾವಾರು ಹಂಚಿಕೆಯಂತೆ ಆರ್ಥಿಕ ಇಲಾಖೆಯಿಂದ ನೇರವಾಗಿ

ಬಿಡುಗಡೆಯಾಗುವ ಅನುದಾನಕ್ಕೆ ಜಿ.ಪಂ. ಗಳಲ್ಲಿ ಕಾರ್ಯಕ್ರಮದ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸಲಾಗುತ್ತದೆ.

13ನೇ ಹಣಕಾಸು ಯೋಜನೆಯಡಿ ಜಿಲ್ಲಾ ಪಂಚಾಯತಿಗಳಿಗೆ ರಸ್ತೆ ಉದ್ದಳತೆ ಆಧಾರದ ಮೇಲೆ ಅನುದಾನ ಹಂಚಿಕೆಯಾಗಿದ್ದು, ಅದರಂತೆ ಜಿ.ಪಂ. ಗಳಲ್ಲಿ ಕ್ರಿಯಾ ಯೋಜನೆ ತಯಾರಿಸಿ, ಕ್ರೋಢೀಕೃತ ಕ್ರಿಯಾ ಯೋಜನೆಗೆ ಉನ್ನತ ಮಟ್ಟದ ಸಮಿತಿ ಸಭೆಯ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತದೆ.

ಯೋಜನೇತರ ಲೆಕ್ಕ ಶೀರ್ಷಿಕೆ–3054ರ ನಿರ್ವಹಣಾ ಅನುದಾನದಡಿ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾದ ಟಾಸ್ಕ್ ಫೋರ್ಸ್ ಸಮಿತಿ ಮೂಲಕ ಜಿ.ಪಂ.ಗಳಿಗೆ ರಸ್ತೆ ಉದ್ದಳತೆ ಆಧಾರದ ಮೇಲೆ ಹಂಚಿಕ ಮಾಡವ ಅನುದಾನದಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಸದರಿ ಯೋಜನೆಯ ಮಾರ್ಗಸೂಚಿಯಂತೆ ಆಯ್ಕೆಯಾಗುವ ರಸ್ತೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಮೇಲ್ಕಂಡ ಎಲ್ಲಾ ಯೋಜನೆಗಳ ಕಾಮಗಾರಿಗಳನ್ನು ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದಲ್ಲಿ ಪೂರ್ಣಗೊಳಿಸಲು ಯೋಜಿಸಿದೆ.

ಟ್ಟಿಗೆಯಲ್ಲಿನ ಪ್ರಶ್ನೆಗಳಿಗೆ: 1247ರ ಉತ್ತರವಾಗಿದೆ

| ಅನುಬಂಧ-1 | | |
|---|---|---|
| ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಅಭಿವೃದ್ಧಿಪಡಿಸಲಾದ ಜಿಲ್ಲಾವಾರು ಗ್ರಾಮೀಣ ರಸ್ತೆಗಳ ವಿವರ | | |
| ಕ್ರ ಸಂ. | ಜಿಲ್ಲೆ | ರಸ್ತೆಯ ಉದ್ದ ಕಿ.ಮೀ. ಗಳಲ್ಲಿ |
| 1 | ಬಾಗಲಕೋಟೆ | 443.57 |
| 2 | ಬೆಂಗಳೂರು (ಗ್ರಾ) | 591.90 |
| 3 | ರಾಮನಗರ | 282.09 |
| 4 | ಬೆಂಗಳೂರು (ನ) | 330.90 |
| 5 | ಬೆಳಗಾವಿ | 800.41 |
| 6 | ಬಳ್ಳಾರಿ | 613.73 |
| 7 | ಬೀದರ್ | 496.18 |
| 8 | ಬಿಜಾಪುರ | 552.02 |
| 9 | ಚಾಮರಾಜನಗರ | 315.69 |
| 10 | ಚಿಕ್ಕಮಗಳೂರು | 572.25 |
| 11 | ಚಿತ್ರದುರ್ಗ | 528.60 |
| 12 | ದಕ್ಷಿಣ ಕನ್ನಡ | 534.93 |
| 13 | ದಾವಣಗೆರೆ | 607.60 |

| | | |
|---|---|---|
| 14 | ಧಾರವಾಡ | 431.82 |
| 15 | ಗದಗ್ | 417.46 |
| 16 | ಗುಲ್ಬರ್ಗಾ | 727.55 |
| 17 | ಯಾದಗಿರಿ | 258.22 |
| 18 | ಹಾಸನ | 608.75 |
| 19 | ಹಾವೇರಿ | 705.52 |
| 20 | ಕೊಡಗು | 169.90 |
| 21 | ಕೋಲಾರ | 614.34 |
| 22 | ಚಿಕ್ಕಬಳ್ಳಾಪುರ | 547.87 |
| 23 | ಕೊಪ್ಪಳ | 528.35 |
| 24 | ಮಂಡ್ಯ | 504.44 |
| 25 | ಮೈಸೂರು | 584.64 |
| 26 | ರಾಯಚೂರು | 738.29 |
| 27 | ಶಿವಮೊಗ್ಗ | 735.49 |
| 28 | ತುಮಕೂರು | 960.39 |
| 29 | ಉಡುಪಿ | 383.01 |
| 30 | ಉತ್ತರ ಕನ್ನಡ | 575.41 |
| | ಒಟ್ಟು | 16161.60 |